ಮೈಸೂರ ಗಜೆಟ.

ನಂ. 11 ಸರ್ಕಾರದಿಂದ ಪ್ರಾಯಿಷ್ ಆದ್ದು. ಸ್ 1884.

ಬೆಂಗಳೂರು, ಶನಿವಾರ, ಮಾರ್ಚೀ ತಾ॥ 15, ಸ್ 1884.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದೀರ್ವಾರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್ಟೆಂಡೆಂಟರು, ಕಾಂಟ್ರೋರರವರು, ಮಣಿ ಆರ್ಡರ್ ಕಂಟ್ರೋಲರ್, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಮಿಲಿಟೇರಿ ಸಿಕ್ರಟೆರಿಯವರು, ರಿಜಿಸ್ಟ್ರೇರ್ಸ ಇನ್‌ಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಅಂಚೇ ಬಕ್‌ಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ ಸೆಷನ್ಸ ಜಡ್ಜೀರು, ಡಿ॥ ಡೆಪ್ಯೂಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್ಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷ್ಸಗಳು—ಇಲ್ಲಾ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲಾ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದೀವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 7ನೇ ಮಾರ್ಚೀ 1884.

ನಂ. 331—ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಯರ್. ಚೆಲುವಯ್ಯಂಗಾರ್‌ಯವರು, ಮೈಸೂರು ಡಿಸ್ಟ್ರಿಕ್ಟು ಟ್ರೆಜರೀ ಚಾರ್ಜನ್ನು ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಏ. ಕುಪ್ಪುಸಾಮಿ ಮೊದಲಿಯಾರ್‌ವರಿಂದ, 1884ನೇ ಇಸವಿ ಫಿಬ್ರವರೀ 28ನೇ ಮುಕ್ತಮಿನ ಪೂರ್ವಾನ್ನ ಡಲ್ಲಿ, ವಹಿಸಿರುತ್ತಾರೆ.

ನಂ. 332—ತುಮಕೂರು ಡಿಸ್ಟ್ರಿಕ್ಟು, ತುರುವೇಕೆರೆ ಆಕ್ಟಿಂಗ್ ಡೆಪ್ಯೂಟಿ ಅಮಲ್‌ದಾರ್ ವ 3ನೇ ಕ್ಲಾಸ್ ಮೊಜಿಸ್ಟ್ರೇಟ್ ಸಿ. ನಾಗೇಶ್ವರಯ್ಯನವರು, ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 335ನೇ ಸೆಕ್ಷನ್ ನಿಯಮವನ್ನನುಸರಿಸಿ, ಫಿರ್ಯಾದಿಗಳ ವ ಸಾಕ್ಷ್ಯಗಳ ಸಾಕ್ಷ್ಯವನ್ನು ಕನ್ನಡಭಾಷೆಯಲ್ಲಿ ಸ್ವದಸ್ತೂರ್ ತೆಗದುಕೊಳ್ಳುವಂತೆ ಅಪ್ಪಣೆ ಕೊಡಲ್ಪಟ್ಟಿರುತ್ತಾರೆ.

ನಂ. 333—ಮೈಸೂರು ಡಿಸ್ಟ್ರಿಕ್ಟು, ಹೆಗ್ಗಡದೇವನಕೋಟೆ ತಾಲ್ಲೂಕು ಅಮಲ್‌ದಾರ್ ರಘುನಾಥರಾಯರವರಿಗೆ ಅವರು ಉಪಯೋಗಿಸಿಕೊಂಡ ತಾರೀಖು ಲಾಗಾಯತು ಸ್ವಂತಕೆಲಸದ ಮೇಲೆ 14 ದಿನಗಳರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 21ನೇ ಮಾರ್ಚೀ 1883.

ನಂ. 84.—ಕಾರ್ಯಾರ್ಥ ದೀವಾನರವರನ್ನು ಭೇಟೀ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಮಂಗಳವಾರಗಳಲ್ಲಿ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಗೆ ಬರತಕ್ಕದ್ದು. ಈ ಬಗ್ಗೆ ಹಿಂದಿನ ದಿನ ಸೆಕ್ರಟೇರಿಯವರಿಗೆ ತಮ್ಮ ಕಾರ್ಡಗಳನ್ನು ಕಳುಹಿಸತಕ್ಕದ್ದು.

2. ಅರ್ಜೀದಾರರು ಶುಕ್ರವಾರಗಳ ದಿನ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಯಲ್ಲಿ ಕೇಳಲ್ಪಡುವರು.

"ಬಮೋಜೀಬ" ಹುಕ್ಕುಂ,"

ಆರ್. ವಿಜಯೀಂದ್ರರಾವ್,
ಸೆಕ್ರಟೇರಿ.

ತಾರೀಖು 22ನೇ ಮಾರ್ಚೀ 1883.

ನಂ. 85.—ದೀವಾನರವರು ತಮ್ಮ ವಾಸಸ್ಥಾನದಲ್ಲಿ ಪ್ರತಿ ಬುಧವಾರ ಮಧ್ಯಾನ್ನ 12 ಘಂಟೆಯಲ್ಲೂ, ಗುರುವಾರಗಳಲ್ಲಿ ಬೆಳಿಗ್ಗೆ 8 ಘಂಟೆಯಲ್ಲೂ, ತಮ್ಮ ಭೇಟೀ ತೆಗದುಕೊಳ್ಳಲಪೇಕ್ಷಿಸತಕ್ಕವರಿಗೆ ಭೇಟೀ ಕೊಡುವರು. ಅವರು ತಮ್ಮ ಕಾರ್ಡ ಚೀಟಿಗಳನ್ನು ದೀವಾನರವರ ಪ್ರೈವೇಟ್ ಸೆಕ್ರಟೇರಿಯವರಿಗೆ ಹಿಂದಿನ ದಿನದಲ್ಲಿ ಕಳುಹಿಸತಕ್ಕದ್ದು.

"ಬಮೋಜೀಬ್ ಹುಕ್ಕುಂ,"

ಸಿ. ರಾಘವಾಚಾರ್ಲು,
ಪ್ರೈವೇಟ್ ಸೆಕ್ರಟೇರಿ.